ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಛೇರಿ,
ಗೋಪನಕೊಪ್ಪ, ಹುಬ್ಬಳ್ಳಿ - 580023.
Tel: +91836 2324196

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Company Office,
Gopanakoppa, Hubballi - 580023
E-mail Id: eehrd.hescom@gmail.com

Corporate Identity Number (CIN): U31401KA2002SGC030437

ಕ್ರ.ಸಂ: ಹೆಸ್ಕಾಂ/ಪ್ರ.ವ್ಯ(ಆ&ಮಾ.ಸಂ.ಅ)/ಇಇ(ಮಾ.ಸಂ.ಅ&ಕೈ.ತ.ಕೇಂ)/25-26/ 23425. ದಿ: 11 FEB 2026

# ಪ್ರಕಟಣೆ

ವಿಷಯ: 2026-27 ನೇ ಸಾಲಿನಲ್ಲಿ ಐಟಿಐ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ **388** ಶಿಶುಕ್ಷುಗಳನ್ನು ಆಯ್ಕೆ ಮಾಡುವ ಕುರಿತು.

*********

**2026-27** ನೇ ವರ್ಷದ ಅವಧಿಗಾಗಿ ಐಟಿಐ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ **388** ಶಿಶುಕ್ಷುಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಕರೆಯಲಾಗಿದ್ದು, ಅರ್ಹ ಅಭ್ಯರ್ಥಿಗಳಿಗೆ ಬೇಕಾಗುವ ಅರ್ಹತೆಗಳ ವಿವರ ಹಾಗೂ ಶಿಶುಕ್ಷುಗಳು ಸಲ್ಲಿಸಬೇಕಾಗುವ ಅರ್ಜಿಯ ನಮೂನೆ ಹಾಗೂ ಸಂಬಂಧಿತ ಲಗತ್ತುಗಳು ಹೆಸ್ಕಾಂನ ವೆಬ್ ಸೈಟ್: **www.hescom.karnataka.gov.in** ನಲ್ಲಿ ಲಭ್ಯವಿರುತ್ತವೆ. ಭರ್ತಿ ಮಾಡಿದ ಅರ್ಜಿಗಳನ್ನು, ಲಗತ್ತುಗಳೊಂದಿಗೆ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕೈಗಾರಿಕಾ ತರಬೇತಿ ಕೇಂದ್ರ (ಐ.ಟಿ.ಸಿ), ಹೆಸ್ಕಾಂ, ವಿದ್ಯುತ್ ನಗರ, ಕಾರವಾರ ರಸ್ತೆ, ಹುಬ್ಬಳ್ಳಿ – 580024, ಇವರಿಗೆ ದಿನಾಂಕ: **09.03.2026** ರ ಸಂಜೆ **4.00** ಘಂಟೆಯ ಒಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬೇಕು. ಮುಂದಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ವಿ), ಕೈಗಾರಿಕಾ ತರಬೇತಿ ಕೇಂದ್ರ, ವಿದ್ಯುತ್ ನಗರ, ಕಾರವಾರ ರಸ್ತೆ, ಹುಬ್ಬಳ್ಳಿ ಇವರನ್ನು ಸಂಪರ್ಕಿಸಿರಿ (0836-2956611).

ಸಹಿ/-

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)
ನಿಗಮ ಕಛೇರಿ, ಗೋಪನಕೊಪ್ಪ, ಹುಬ್ಬಳ್ಳಿ

10/02/26 10/02/26

## ಹೆಸ್ಕಾಂನಲ್ಲಿ 2026-27 ಸಾಲಿನ ಶಿಶಿಕ್ಷು ತರಬೇತಿಯ ವಿವರಣಾ ಪತ್ರ

### I. ಪ್ರಸ್ತಾವನೆ

1. ಕರ್ನಾಟಕ ಸರ್ಕಾರದ ಅಪ್ರೆಂಟಿಸ್ **ಕಾಯ್ದೆ-1961** ರನ್ವಯ ಐ.ಟಿ.ಐ (ಎರಡು ವರ್ಷ) ಪಾಸಾದ ಅಭ್ಯರ್ಥಿಗಳಿಗೆ ಒಂದು ವರ್ಷ ಅವಧಿಯ ಶಿಶಿಕ್ಷು ತರಬೇತಿ ಹೆಸ್ಕಾಂನಲ್ಲಿ ನೀಡಲಾಗುವುದು.
2. ಐ.ಟಿ.ಐ(ಇಲೆಕ್ಟ್ರೀಶಿಯನ್) ವೃತ್ತಿಯಲ್ಲಿ ಉತ್ತೀರ್ಣರಾಗಿ NCVT/SCVT-PROVISIONAL NATIONAL TRADE CERTIFICATE ಅಂಕ ಪಟ್ಟಿಯನ್ನು ಹೊಂದಿದ **338** ಸಂಖ್ಯೆಯ ಸೂಕ್ತ ಅಭ್ಯರ್ಥಿಗಳನ್ನು **2026-27** ಸಾಲಿನಲ್ಲಿ ಆಯ್ಕೆ ಮಾಡಿ ನಮ್ಮ ಇಲಾಖೆಯಿಂದ ಒಂದು ವರ್ಷದ ಶಿಶಿಕ್ಷು ತರಬೇತಿಯನ್ನು ನೀಡಲಾಗುತ್ತದೆ.

### II. ಯೋಜನೆಯ ಉದ್ದೇಶಗಳು:

ಎರಡು ವರ್ಷದ ಐ.ಟಿ.ಐ ವೃತ್ತಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಅವರ ವೃತ್ತಿಯಲ್ಲಿ ಹೆಚ್ಚಿನ ಜ್ಞಾನವನ್ನು ಪಡೆಯಲು ಅನುಕೂಲವಾಗುವ ಉದ್ದೇಶದಿಂದ ಮಾಸಿಕ ಶಿಶುಕ್ಷು ವೇತನ (Stipend) **ರೂ. 9,600/-** ಸಹಿತ ಶಿಶಿಕ್ಷು ತರಬೇತಿಯನ್ನು ನೀಡಲಾಗುತ್ತದೆ.

ಹೆಸ್ಕಾಂನ ಕಾರ್ಯ ಮತ್ತು ಪಾಲನಾ ವಿಭಾಗ/ ಮಾಪಕ ತಪಾಸಣಾ ವಿಭಾಗ/ 33 ಕೆವಿ ಉಪ-ಕೇಂದ್ರ ಮತ್ತು ಲೈನ್ ಗಳ ವಿಭಾಗಗಳ ವ್ಯಾಪ್ತಿಗೆ ಒಳಪಡುವ ಕಛೇರಿಗಳಿಗೆ ಪ್ರಾಯೋಗಿಕ ತರಬೇತಿಗಾಗಿ ಕೈಗಾರಿಕಾ ತರಬೇತಿ ಕೇಂದ್ರದಿಂದ ನಿಯೋಜಿಸಲಾಗುವುದು.

### III. ಯಾರು ಅರ್ಹರು:

1. ಎರಡು ವರ್ಷದ ಐ.ಟಿ.ಐ (ಇಲೆಕ್ಟ್ರೀಶಿಯನ್) ವೃತ್ತಿಯಲ್ಲಿ ಉತ್ತೀರ್ಣರಾಗಿ NCVT/SCVT - PROVISIONAL NATIONAL TRADE CERTIFICATE ಅಂಕ ಪಟ್ಟಿಯನ್ನು ಹೊಂದಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು.
2. ಅಭ್ಯರ್ಥಿಗಳು ಯಾವುದಾದರು ಸರ್ಕಾರಿ/ಸರ್ಕಾರಿ ಅನುದಾನಿತ/ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಿಂದ ಐ.ಟಿ.ಐಯನ್ನು ಪೂರ್ಣಗೊಳಿಸಿರಬೇಕು.
3. ಇಲೆಕ್ಟ್ರೀಶಿಯನ್ ವೃತ್ತಿ ಹೊರತುಪಡಿಸಿ ಬೇರೆ ಯಾವುದೇ ವೃತ್ತಿಯನ್ನು ಪರಿಗಣಿಸಲಾಗುವುದಿಲ್ಲ.
4. ಈಗಾಗಲೇ ಶಿಶುಕ್ಷು ತರಬೇತಿಯನ್ನು ಪೂರ್ಣಗೊಳಿಸಿದ ಅಥವಾ ತರಬೇತಿ ಹೊಂದುತ್ತಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಪುನರಾವರ್ತಿತ ಎಂದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳ ನೋಂದಣಿಯನ್ನು ವಜಾಗೊಳಿಸಲಾಗುವುದು.
5. ಪ್ರವೇಶ ಪಡೆಯಲು ಇಚ್ಚಿಸುವ ಅಭ್ಯರ್ಥಿಯ ವಯಸ್ಸು **09.03.2026** ಕ್ಕೆ **25** ವರ್ಷಕ್ಕಿಂತ ಮೀರಿರಬಾರದು. ಪರಿಶಿಷ್ಟ ಜಾತಿ/ ಪಂಗಡದ ಅಭ್ಯರ್ಥಿಯ ವಯಸ್ಸು **09.03.2026** ಕ್ಕೆ **30** ವರ್ಷಕ್ಕಿಂತ ಮೀರಿರಬಾರದು.
6. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ತೆಗೆದುಕೊಂಡಿದ್ದು ಮತ್ತು ಕನ್ನಡದಲ್ಲಿ ಓದಲು ಹಾಗೂ ಬರೆಯಲು ತಿಳಿದಿರಬೇಕು.

IV. **ಶಿಶಿಕ್ಷು ತರಬೇತಿಗಾಗಿ ಅರ್ಜಿ ಸಲ್ಲಿಸುವ ವಿಧಾನ:**

1. ಪೂರ್ಣ ವಿವರವಿರುವ ಎ-4 ಸೈಜಿನ ಹಾಳೆಯಲ್ಲಿ ಸ್ವಯಂ ಲಿಖಿತ ಅಥವಾ ಬೆರಳಚ್ಚು ಮಾಡಿದ ನಿಗದಿತ ನಮೂನೆಯಲ್ಲಿರುವ (ಲಗತ್ತಿಸಲಾಗಿದೆ) ಅರ್ಜಿಗಳನ್ನು ಸಾಮಾನ್ಯ ಅಭ್ಯರ್ಥಿಗಳು **ರೂ.100/-**ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು **ರೂ. 50/-** ಮೊತ್ತದ ಇಂಡಿಯನ್ ಪೋಸ್ಟಲ್ ಆರ್ಡರನ್ನು **"ಆರ್ಥಿಕ ಸಲಹೆಗಾರರು, ಹುವಿಸಕಂನಿ, ಹುಬ್ಬಳ್ಳಿ"** ಇವರ ಹೆಸರಿನಲ್ಲಿ ಖರೀದಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು ಹಾಗೂ ಲಕೋಟೆಯ ಮೇಲೆ **"ಇಲೆಕ್ಟ್ರೀಶಿಯನ್ ವೃತ್ತಿಯ ಶಿಶುಕ್ಷು ತರಬೇತಿಗಾಗಿ ಅರ್ಜಿ"** ಎಂದು ನಮೂದಿಸಬೇಕು.
2. ಮೇಲೆ ತಿಳಿಸಿದ ಮೊತ್ತದ ಇಂಡಿಯನ್ ಪೋಸ್ಟಲ್ ಆರ್ಡರನ್ನು ಹೊರತು ಪಡಿಸಿ, ಬ್ಯಾಂಕ್ ಡಿಮಾಂಡ ಡ್ರಾಫ್ಟ್ (DD) ಅಥವಾ ನಗದನ್ನು ಲಗತ್ತಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
3. ಅಭ್ಯರ್ಥಿಗಳು **ಕ್ರ.ಸಂ. V** ರಲ್ಲಿ ವಿವರಿಸಿದಂತೆ ಅಪ್ರೆಂಟಿಸ್‌ಶಿಪ್ ಪೋರ್ಟಲ್ **www.apprenticeshipindia.gov.in** ನಲ್ಲಿ ನೋಂದಾಯಿಸಬೇಕು. ನಂತರ **Hubli Electricity Supply Company Ltd.** ನ್ನು ಆಯ್ಕೆ ಮಾಡಬೇಕು.
4. ಅಪ್ರೆಂಟಿಸ್‌ಶಿಪ್ ಪೋರ್ಟಲ್ಲಿನಲ್ಲಿ ನೋಂದಣಿ ಮಾಡಿಕೊಂಡ ಪ್ರತಿಯನ್ನು ಅರ್ಜಿಯ ಜೊತೆಗೆ ಲಗತ್ತಿಸಬೇಕು.
5. ಅರ್ಜಿಯೊಂದಿಗೆ ಈ ಕೆಳಗಿನ ದಾಖಲಾತಿಗಳ ನಕಲು ಪ್ರತಿಯನ್ನು ಲಗತ್ತಿಸಬೇಕು.
   i. ಸ್ವಯಂ ದೃಢೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ. ಅಂಕಪಟ್ಟಿ
   ii. ಸ್ವಯಂ ದೃಢೀಕರಿಸಲ್ಪಟ್ಟ ಇಲೆಕ್ಟ್ರೀಶಿಯನ್ ವೃತ್ತಿಯಲ್ಲಿ ಎರಡು ವರ್ಷದ ಕೋರ್ಸಿನ ಐ.ಟಿ.ಐ ಅಂಕಪಟ್ಟಿ.
   iii. ಪತ್ರಿಕಾ ಪ್ರಕಟಣೆಗೊಂಡ ದಿನಾಂಕದ ನಂತರದ ಸ್ವಯಂ ಧೃಡೀಕರಿಸಲ್ಪಟ್ಟ ಸರಕಾರಿ ಆಸ್ಪತ್ರೆಯ ವೈದ್ಯರಿಂದ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ
   iv. ಸ್ವಯಂ ದೃಢೀಕರಿಸಲ್ಪಟ್ಟ ವರ್ಗ/ಸಮುದಾಯದ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಕ್ಕೆ ಅನ್ವಯಿಸಿದರೆ ಮಾತ್ರ)
   v. ಆಧಾರ ಕಾರ್ಡ.
   vi. ಇತ್ತೀಚಿನ ಪಾಸಪೋರ್ಟ್ ಗಾತ್ರದ ಒಂದು ಭಾವ ಚಿತ್ರವನ್ನು ಅರ್ಜಿಗೆ ಲಗತ್ತಿಸಬೇಕು.
6. ಮೇಲೆ ತಿಳಿಸಿರುವ ದಾಖಲಾತಿಗಳಲ್ಲಿ ಯಾವುದಾದರೂ ಒಂದು ದಾಖಲಾತಿಯನ್ನು ಸಲ್ಲಿಸದಿದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
7. ಪೂರ್ಣ ವಿವರವಿಲ್ಲದ (ನಿಗದಿತ ನಮೂನೆಯಲ್ಲಿಲ್ಲದ ಅರ್ಜಿಗಳು) ಅರ್ಜಿಗಳನ್ನು ತಿರಸ್ಕರಿಸಲಾಗುವುದು.
8. ಭರ್ತಿ ಮಾಡಿದ ಅರ್ಜಿಗಳನ್ನು **ಕಾರ್ಯನಿರ್ವಾಹಕ ಅಭಿಯಂತರರು(ವಿ), ಕೈಗಾರಿಕಾ ತರಬೇತಿ ಕೇಂದ್ರ, (ITC), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ವಿದ್ಯುತ್‌ನಗರ, ಕಾರವಾರ ರಸ್ತೆ, ಹುಬ್ಬಳ್ಳಿ-580024** ರವರ ಕಛೇರಿಗೆ **ದಿನಾಂಕ: 09.03.2026** ರ ಸಂಜೆ **4** ಘಂಟೆಯೊಳಗಾಗಿ ಅಂಚೆಯ ಮೂಲಕ ಕಳುಹಿಸಬೇಕು.
9. ಯಾವುದೇ ಕಾರಣಕ್ಕೂ ಪೋಸ್ಟಲ್ ಆರ್ಡರ್‌ಗಳನ್ನು ವಾಪಸ್ ಮಾಡಲಾಗುವುದಿಲ್ಲ ಮತ್ತು ಶಿಫಾರಸ್ಸು ತರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಯಾವುದೇ ರೀತಿಯ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.

V. <u>ಶಿಶಿಕ್ಷು ತರಬೇತಿಗಾಗಿ ಅಪ್ರೆಂಟಿಸ್‌ಶಿಪ್ ಪೋರ್ಟಲ್ಲಿನಲ್ಲಿ ನೋಂದಣಿ ಮಾಡುವ ವಿಧಾನ:</u>

1. ಅಭ್ಯರ್ಥಿಗಳು ಅಪ್ರೆಂಟಿಸ್‌ಶಿಪ್ ಪೋರ್ಟಲ್ **www.apprenticeshipindia.gov.in** ನಲ್ಲಿ ಇರುವ ಮಾರ್ಗಸೂಚಿ ವಿಡಿಯೋಗಳಲ್ಲಿ (Instructional Videos) ಸೂಚಿಸಿರುವ ಪ್ರಕಾರ ನೋಂದಾಯಿಸಬೇಕು. ನಂತರ **Hubli Electricity Supply Company Ltd.** ನ್ನು ಆಯ್ಕೆ ಮಾಡಬೇಕು.

2. ಅಪ್ರೆಂಟಿಸ್‌ಶಿಪ್ ಪೋರ್ಟಲ್ಲಿನಲ್ಲಿ ನೋಂದಾಯಿಸಿಕೊಂಡು **Hubli Electricity Supply Company Ltd**. ಅನ್ನು ಆಯ್ಕೆ ಮಾಡಲು ದಿನಾಂಕ: **02.03.2026** ಕೊನೆಯ ದಿನವಾಗಿರುತ್ತದೆ.

3. ಅಪ್ರೆಂಟಿಸ್‌ಶಿಪ್ ಪೋರ್ಟಲ್ಲಿನಲ್ಲಿ ನೋಂದಾಯಿಸಿ, **Hubli Electricity Supply Company Ltd**. ಅನ್ನು ಆಯ್ಕೆ ಮಾಡದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

4. ಅಪ್ರೆಂಟಿಸ್‌ಶಿಪ್ ಪೋರ್ಟಲ್ಲಿನಲ್ಲಿ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯ ಪ್ರಕಾರ (ಹೆಸರು, ಹುಟ್ಟಿದ ದಿನಾಂಕ, ಇತ್ಯಾದಿ) ನೋಂದಾಯಿಸಿಕೊಳ್ಳಬೇಕು.

5. ಆಧಾರ ಕಾರ್ಡ ವಿವರ ಕೂಡ ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯ ಪ್ರಕಾರ ಇದ್ದಾಗ ಮಾತ್ರ ನೋಂದಣಿಯು ಪೂರ್ಣಗೊಳ್ಳುತ್ತದೆ. ಸದರಿ ಪೋರ್ಟಲ್ಲಿನಲ್ಲಿ ಆಧಾರ ಪರಿಶೀಲನೆ ಪೂರ್ಣಗೊಳ್ಳದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

6. ಅಭ್ಯರ್ಥಿಗಳು ಈ ಅಧಿಸೂಚನೆಯನ್ನು ಓದಿಕೊಂಡು ಆಯ್ಕೆಯ ಅರ್ಹತೆ ಮಾನದಂಡಗಳನ್ನು ತಿಳಿದುಕೊಳ್ಳಬೇಕು.

7. ಅಭ್ಯರ್ಥಿಯು ನೋಂದಾಯಿಸಿದ ಮೊಬೈಲ್ ಸಂಖ್ಯೆಗೆ OTP ಬರುವುದು.

8. ಅಭ್ಯರ್ಥಿಗಳು ಪೋರ್ಟಲನಲ್ಲಿ ಸರಿಯಾದ ಮಾಹಿತಿಯನ್ನು ಒದಗಿಸುವುದು. ಒದಗಿಸಿರುವ ದಾಖಲೆಗಳನ್ನು ತಾತ್ಕಾಲಿಕ ಆಯ್ಕೆಯ ಸಮಯದಲ್ಲಿ ಪರಿಶೀಲಿಸಲಾಗುವುದು.

9. ಆನ್‌ಲೈನ್‌ನಲ್ಲಿ ನೋಂದಣಿ ಮಾಡುವಾಗ, ಸರಿಯಾದ ಮಾಹಿತಿಯನ್ನು ಭರ್ತಿ ಮಾಡಲು ವಿನಂತಿಸಲಾಗಿದೆ. ಆನ್‌ಲೈನ್ ನೋಂದಣಿ ನಮೂನೆಯಲ್ಲಿನ ಮಾಹಿತಿ ಮತ್ತು ಅಪಲೋಡ್ ಮಾಡಿರುವ ಪ್ರಮಾಣ ಪತ್ರದಲ್ಲಿನ ಮಾಹಿತಿಯಲ್ಲಿ ವ್ಯತ್ಯಾಸ ಕಂಡು ಬರಬಾರದು. ಆನ್‌ಲೈನ್ ನೋಂದಣಿ ನಮೂನೆಯಲ್ಲಿ ಸಲ್ಲಿಸಿದ ಮಾಹಿತಿಯನ್ನು ಮುಂದಿನ ಪ್ರಕ್ರಿಯೆಗಾಗಿ ಅಂತಿಮವಾಗಿ ತೆಗೆದುಕೊಳ್ಳಲಾಗುವುದು.

VI. <u>ತಾತ್ಕಾಲಿಕ ಆಯ್ಕೆ ಮತ್ತು ಪ್ರವೇಶ</u>

1. ತಾತ್ಕಾಲಿಕವಾಗಿ ಆಯ್ಕೆಯಾದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ಹೆಸ್ಕಾಂನಲ್ಲಿ ಶಿಶಿಕ್ಷು ತರಬೇತಿಗೆ ಪ್ರವೇಶ ಪಡೆಯಲು ಹಕ್ಕು ದೊರೆಯುವುದಿಲ್ಲ. ಪ್ರವೇಶ ಪಡೆಯುವ ಸಮಯದಲ್ಲಿ ಆಯ್ಕೆಗೊಂಡ ಪ್ರತಿಯೊಬ್ಬ ಅಭ್ಯರ್ಥಿಯು ಆನ್‌ಲೈನ್ ನಲ್ಲಿ ಅಪಲೋಡ್ ಮಾಡಿರುವ ಪ್ರಮಾಣ ಪತ್ರಗಳನ್ನು ಹಾಜರುಪಡಿಸಬೇಕು. ಪ್ರವೇಶ ಪಡೆಯುವವರೆಗೆ ಆಯ್ಕೆಯು ತಾತ್ಕಾಲಿಕವಾಗಿರುವುದು.

2. ವಿವಾದಾಸ್ಪದ ಸಂದರ್ಭಗಳಲ್ಲಿ ಹೆಸ್ಕಾಂನ ನಿರ್ಣಯವೇ ಅಂತಿಮವಾದದ್ದು ಹಾಗೂ ಈ ನಿರ್ಣಯಕ್ಕೆ ಎಲ್ಲಾ ಅಭ್ಯರ್ಥಿಗಳು ಬದ್ಧವಾಗಿರಬೇಕು. ಈ ಕಾರಣಕ್ಕಾಗಿ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.

3. ಅಭ್ಯರ್ಥಿಗಳನ್ನು ಹೆಸ್ಕಾಂನ ಎಲ್ಲಾ ವೃತ್ತಗಳ ವ್ಯಾಪ್ತಿಗೆ ಒಳಪಡುವ ಕಛೇರಿಗಳಿಗೆ ನಿಯೋಜನೆ ಮಾಡಲಾಗುವುದು. ಆಯ್ಕೆ ಆದ ಕಾರ್ಯಸ್ಥಾನದ ಹೊರತು ಬೇರೊಂದು ಕಾರ್ಯಸ್ಥಾನಕ್ಕೆ ವರ್ಗಾಯಿಸಬೇಕೆಂಬ ಯಾವುದೇ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

4. ಒಂದು ವೇಳೆ ಅಭ್ಯರ್ಥಿಗಳು ಹೆಸ್ಕಾಂನ ವ್ಯಾಪ್ತಿಗೆ ಒಳಪಡುವ ಕಛೇರಿಗಳಲ್ಲಿ ನಿಯೋಜನೆಗೆ ಒಪ್ಪದೇ ಹೋದರೆ ಅಂತಹ ಅಭ್ಯರ್ಥಿಗಳಿಗೆ ತರಬೇತಿಯಲ್ಲಿ ಮುಂದುವರೆಯಲು ಅವಕಾಶ ನೀಡಲಾಗುವುದಿಲ್ಲ.

<u>ವಿಶೇಷ ಸೂಚನೆ:</u>

1. ಅಭ್ಯರ್ಥಿಗಳು ಸಲ್ಲಿಸಿದ ವಿವರಗಳಲ್ಲಿ (ಹೆಸರು, ಜನ್ಮ ದಿನಾಂಕ, ಜಾತಿ ಇತ್ಯಾದಿ) ಯಾವುದೇ ವ್ಯತ್ಯಾಸವಿರಬಾರದು.
2. ಅಭ್ಯರ್ಥಿಗಳೊಂದಿಗೆ ಆಯ್ಕೆ ಪ್ರಕ್ರೀಯೆಯ ವಿಚಾರವಾಗಿ ಯಾವುದೇ ಪತ್ರ/ಇ-ಮೇಲ್/ದೂರವಾಣಿ ಮೂಲಕ ವ್ಯವಹಾರ ಮಾಡಲಾಗುವುದಿಲ್ಲ. ಆಯ್ಕೆ ಪ್ರಕ್ರೀಯೆಯ ಪ್ರತಿಯೊಂದು ಸ್ತರದ ವಿವರಗಳ ಬಗ್ಗೆ **hescom.karnataka.gov.in → Documents → HRD & ITC Centre** ಇಲ್ಲಿ ನಿಯಮಿತವಾಗಿ ನೋಡಬೇಕು.

<u>ಎಚ್ಚರಿಕೆ:</u>

1. ಅಭ್ಯರ್ಥಿಗಳು ಅರ್ಜಿ ತುಂಬುವಾಗ ಮೊದಲೇ ಎಲ್ಲಾ ಸೂಚನೆಗಳನ್ನು ಓದಿಕೊಂಡು ತಪ್ಪಾಗದಂತೆ, ಎಚ್ಚರವಹಿಸಿ ಮಾಹಿತಿಯನ್ನು ಅಪಲೋಡ್ ಮಾಡಬೇಕು.
2. ಅರ್ಜಿಯಲ್ಲಿ ತುಂಬಿದ ಮಾಹಿತಿಯು ಪರಿಶೀಲನೆಯ ನಂತರ ಸುಳ್ಳು/ದೋಷ ಪೂರಿತ ಎಂದು ಕಂಡು ಬಂದಲ್ಲಿ ಅಭ್ಯರ್ಥಿಯ ತಾತ್ಕಾಲಿಕ ಆಯ್ಕೆಯ ನಂತರವೂ ಪ್ರವೇಶವನ್ನು ರದ್ದುಗೊಳಿಸುವ ಅಧಿಕಾರ ಹೆಸ್ಕಾಂಗೆ ಇದೆ.
3. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರ ಇರುವುದಿಲ್ಲ
4. ತಪ್ಪು ದಾಖಲೆಗಳೊಂದಿಗೆ ಪ್ರವೇಶ ಪಡೆದು, ಅಭ್ಯರ್ಥಿ ಕೊಟ್ಟ ಮಾಹಿತಿ ಸುಳ್ಳು ಎಂದು ಕಂಡು ಬಂದಲ್ಲಿ ಕೇವಲ ಪ್ರವೇಶವನ್ನು ವಜಾಗೊಳಿಸುವುದಲ್ಲದೇ ಅಂತಹ ಅಭ್ಯರ್ಥಿಯ ಶಿಶುಕ್ಷು ವೇತನವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು.

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)
ನಿಗಮ ಕಛೇರಿ, ಗೋಪನಕೊಪ್ಪ, ಹುಬ್ಬಳ್ಳಿ

# ಅರ್ಜಿ ನಮೂನೆ

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## ಕೈಗಾರಿಕಾ ತರಬೇತಿ ಕೇಂದ್ರ ಹುಬ್ಬಳ್ಳಿಯಲ್ಲಿಯ 2026-27 ನೇ ಸಾಲಿನ ಶಿಶುಕ್ಷು ತರಬೇತಿಗಾಗಿ ಅರ್ಜಿ

ಫೋಟೋ

ಇಂಡಿಯನ್ ಪೋಸ್ಟಲ್ ಆರ್ಡರ್ ಸಂಖ್ಯೆ :

ದಿನಾಂಕ :

ರೂಪಾಯಿ :

1) ಅಭ್ಯರ್ಥಿಯ ಹೆಸರು :

2) ತಂದೆ/ತಾಯಿ/ಪೋಷಕರ ಹೆಸರು :

3) ಹುಟ್ಟಿದ ದಿನಾಂಕ :

4) ಪರಿಶಿಷ್ಠ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದವರೇ, :
(ಹೌದಾದರೆ ಪ್ರಮಾಣ ಪತ್ರ ಲಗತ್ತಿಸುವುದು).

5) ಪತ್ರ ವ್ಯವಹಾರ ವಿಳಾಸ ಹಾಗೂ :
ಮೊಬೈಲ್ ಸಂಖ್ಯೆ

6) ಅಪ್ರೆಂಟಿಸ್‌ಶಿಪ್ ಪೋರ್ಟಲ್ಲಿನ ನೋಂದಣಿ ಸಂಖ್ಯೆ :
(apprenticeshipindia.gov.in)

7) ವಿದ್ಯಾರ್ಹತೆ: (ಐ.ಟಿ.ಐ. ನಲ್ಲಿ ಗಳಿಸಿದ) :

ಗರಿಷ್ಟ ಅಂಕಗಳು :

ಪಡೆದ ಅಂಕಗಳು :

ಶೇಕಡಾವಾರು ಅಂಕಗಳು :

8) ದೃಢೀಕರಿಸಲ್ಪಟ್ಟ ಜಾತಿ ಪ್ರಮಾಣ ಪತ್ರದ ಛಾಯಾ :
ಪ್ರತಿಯನ್ನು (ಝೆರಾಕ್ಸ) ಲಗತ್ತಿಸಲಾಗಿದೆಯೇ ?

9) ದೃಢೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ :
ಛಾಯಾ ಪ್ರತಿಯನ್ನು(ಝೆರಾಕ್ಸ) ಲಗತ್ತಿಸಲಾಗಿದೆಯೇ?

10) ದೃಢೀಕರಿಸಲ್ಪಟ್ಟ ಇಲೆಕ್ಟ್ರೀಶಿಯನ್ ವೃತ್ತಿಯಲ್ಲಿ :
ಎರಡು ವರ್ಷದ ಕೋರ್ಸಿನ ಐ.ಟಿ.ಐ ಅಂಕಪಟ್ಟಿಯ
ಛಾಯಾ ಪ್ರತಿಯನ್ನು (ಝೆರಾಕ್ಸ) ಲಗತ್ತಿಸಲಾಗಿದೆಯೇ?

11) ಪತ್ರಿಕಾ ಪ್ರಕಟಣೆಗೊಂಡ ದಿನಾಂಕದ ನಂತರದ :
ದೃಢೀಕರಿಸಲ್ಪಟ್ಟ ಸರಕಾರಿ ಆಸ್ಪತ್ರೆಯ ವೈದ್ಯರಿಂದ
ಪಡೆದ ದೈಹಿಕ ಸಾಮರ್ಥ್ಯದ ಪ್ರಮಾಣ ಪತ್ರದ ಛಾಯಾ
ಪ್ರತಿಯನ್ನು (ಝೆರಾಕ್ಸ) ಲಗತ್ತಿಸಲಾಗಿದೆಯೇ?

ಈ ಮೇಲೆ ತಿಳಿಸಿದ ವಿವರಗಳು ಸತ್ಯವಿದೆ ಎಂದು ಪ್ರಮಾಣ ಮಾಡುತ್ತೇನೆ. ಒಂದು ವೇಳೆ ಅಸತ್ಯವೆಂದು ಕಂಡು ಬಂದಲ್ಲಿ ನನ್ನ ಮೇಲೆ ಕಾನೂನು ಕ್ರಮ ಜರುಗಿಸಬಹುದೆಂದು ಒಪ್ಪುತ್ತೇನೆ.

ಸ್ಥಳ:

ಅರ್ಜಿದಾರರ ಸಹಿ,

ದಿನಾಂಕ:

# Candidate Instruction Manual

## THE APPRENTICESHIP PORTAL

The Apprenticeship Portal is a website of the Central Government for exchange of information on Apprenticeship. The public view gives you access to information on Apprenticeship Opportunities Posted by Companies, Registered Candidates, and Apprenticeship Guidelines.

The Candidates can access to information such as available Apprenticeship Opportunities basis the Search Parameters like State, District, Sector and Trade, Organization and so on. To apply against available apprenticeship opportunities, it is mandatory for you register on the portal. The steps for registration are as follows:




**Note: The fields marked in * are mandatory.**

Candidate Registration

Click on the **"Register" button** the top toolbar and select the option **Candidate**.




A **Short Registration Form** will open (as shown below). You would be required to fill your Basic, Family and Contact details and click continue.

***<u>Note: Please enter a valid email ID as the activation link will be send through a mail to that ID. Also, remember the password and you will use it to login to your account on the Apprenticeship Portal.</u>***






A dialog Box with the **Registration number** will notify your account creation after which you will receive an activation Email on the registered Email Address.




On the Email, click the **'Activate'** button (as shown in the image below)

**Apprenticeship Portal**

**Dear ananya,**

Reply all | Delete Junk | ...

Please note this number for all communications

Please Activate your Account

Activate

Thank you for using our application!

Regards,
Apprenticeship Portal

If you're having trouble clicking the "Activate" button, copy and paste the URL below into your web browser: https://apprenticeshipindia.org/activate/5c4df58f44f7d76386684f82/LLtqmuVvCX7se3ppN8hFzw5upmNT6S

Login

Once you click on the Activate Button, the screen will automatically **redirect you to the Log-In page** (see below) where you type your registered **Email ID/Registration Number**

**and Password** *(the email ID and Password are the same you mentioned during registration)* to login.



Profile Completion

Once Logged In, you will have to click on the button **'Complete Your Profile'** (encircled below). You <u>will not be able to apply to any Apprenticeship Opportunity without completing your profile</u>.




Start by clicking the **'Edit'** button (encircled below) to add your "About Me" and Contact Details.




On clicking the 'Edit' button, the following screen will emerge. *The **fields marked in '*' are mandatory.***

Understanding Candidate Dashboard




There are 3 items on your dashboard and they are explained below:

1. **Invitations Received** – Some companies screen your profile and if they feel you're fit for the opportunity, they send out an invitation to you to apply to the opportunity. This section lists the number of invitations received by the candidate.
2. **Applications:** This section lists the number of Apprenticeship Opportunities you had applied to.
3. **Contracts:** This section will show the contract you have signed with the company. Multiple companies can send you contracts, however, you will only be able to accept one.


Home
Apprenticeship Opportunities
Training Providers(BTP)
TPA
Complete Your Profile
< back to profile
Basic Details
Email
ananya.nanda@nsdcindia.org
Mobile Number
Enter Number
Gender
Female
Has Disability
Yes
No
Date Of Birth *
15/01/1982
Date Of Birth Document *
Choose file
No file chosen
Please upload only (jpeg, jpg, png, pdf) files
Maximum 4MB only allowed
Father/Mother/Spouse Name *
gautam
Relationship *
Father
Id Proof Type *
Select Proof type
Document Proof *
Choose file
No file chosen

## Invitations

Companies can view your profile and invite you to apply to an apprenticeship opportunity posted by them. You can view them by clicking the **'Invitations'** option (encircled below) on the left menu.




You can view the details of the opportunity by clicking on the **'View'** button (encircled above). If the opportunity interests you, you can click on the **'Apply'** button (encircled above) to apply to the opportunity.

On clicking 'Apply', you will be given the option to **choose the location** (in cases where the company has offered opportunity in several locations). The following box will appear and you can choose the location based on your preference.



Apply to Opportunities

You can use the option **"Apprenticeship Opportunities"** on the top toolbar to view the opportunities. You can search by **keywords**, such as 'hospitality' or 'fitter', 'operator", "chef", "sewing machine" and so on in the 'Search Opportunities" section (encircled below)




Simply click on the **'Apply'** button (encircled above) to apply to the opportunity of your choice.

# View and Accept Contract

If a company wants to make you an offer, they will send the contract to you. To view the list of contracts, click on the option **'Contracts'** (encircled below) in the left menu




To view details of the contract, click on the option **'View'** (encircled above).

You will be able to see all details of opportunity – Stipend details, working days, location and so on. If all the details are correct as per your knowledge, you can accept the contracts by selecting the option **'Sign'** (encircled below). If for any reason, you don't plan to accept the opportunity, you can select the option **'Reject'** and the contract will get deleted.



Applications and Selection Process

You can view all your application on the tab 'Applications' (encircled below) on the left menu.




The page will show you a summary of all your applications.

After to an Opportunity, the company will review your profile and call invite you for an interview. If the company selects you, they will issue a 'Contract', and you will be able to see this in the 'Status' column above.